ನೀಡಲು ದಿನಾಂಕ : 27–12–2006 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಅದರ ಶಿಫಾರ್ಸನ್ನು ನಿರೀಕ್ಷಿಸಲಾಗಿದೆ.

ಇ)ಮತ್ತು ಈ) ಉಪ ಪ್ರಶ್ನೆ 'ಅ' ಗೆ ನೀಡಿದ ಉತ್ತರವು ಇದಕ್ಕೂ ಅನ್ವಯವಾಗುತ್ತದೆ.

ಉ) ಊ) ಮತ್ತು ಋ) ಸುಪ್ರೀಂಕೋರ್ಟ ನೀಡಿರುವ ತೀರ್ಪಿನಲ್ಲಿ ಗ್ರಾಮ ಸಹಾಯಕರನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ಹೇಳಿದೆ. ಆದ್ದರಿಂದ ಅವರುಗಳ ಸೇವೆಯನ್ನು ಖಾಯಂಗೊಳಿಸಿರುವುದಿಲ್ಲ.

1902 (2457) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರುಗಳು ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳನ್ನು ಭೇಟಿ ಮಾಡಲು ಸರ್ಕಾರವು ಹೊಸದಾಗಿ ನೀತಿ ನಿಯಮಗಳನ್ನು ಜಾರಿಗೆ ತಂದಿದೆಯೇ;

ಆ) ದೂರವಾಣಿ ಮುಖಾಂತರ ಶಾಸಕರು ಪ್ರಧಾನ ಕಾರ್ಯದರ್ಶಿಗಳನ್ನಾಗಲಿ ಅಥವಾ ಕಾರ್ಯದರ್ಶಿಗಳನ್ನಾಗಲಿ ಸಂಪರ್ಕಿಸಲು ಯತ್ನಿಸಿ ಸಾಧ್ಯವಾಗದ ಇದ್ದ ಸಂದರ್ಭದಲ್ಲಿ ಶಾಸಕರುಗಳಿಗೆ ಮರು ದೂರವಾಣಿ ಮಾಡಲು ಸರ್ಕಾರವು ಯಾವುದಾದರೂ ಅಡ್ಡಿಪಡಿಸುವಂತ ಆದೇಶವನ್ನು ನೀಡಿದೆಯೇ;

ಇ) ಶಾಸಕರುಗಳು ವಿವಿಧ ಇಲಾಖೆಗಳಿಗೆ ಭೇಟಿ ನೀಡಲು ಸಮಯವೇನಾದರೂ ಗೊತ್ತುಪಡಿಸಲಾಗಿದೆಯೇ;

ಈ) ಸರ್ಕಾರದ ಮಟ್ಟದಲ್ಲಿ ಶಾಸಕರುಗಳ ಮಾತಿಗೆ ಯಾವುದೇ ಪ್ರಾಮುಖ್ಯತೆಯನ್ನು ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು):

ಅ) ಇಲ್ಲ
ಆ) ಇಲ್ಲ
ಇ) ಇಲ್ಲ
ಈ) ಇಲ್ಲ